ಅ) ಕೊಬ್ಬರಿಯನ್ನು ಸಾಕಷ್ಟು ಉತ್ತಮ ಸ್ಥಿತಿವಂತರು ತಡೆಹಿಡಿದು ಕಾಪಾಡಿ ಜಾಸ್ತಿ ಬೆಲೆಗೆ ಮಾರಿ ಉತ್ತಮ ಲಾಭಗಳಿಸುತ್ತಾರೆ. ಅದೇ ರೀತಿ ಮಧ್ಯಮ ವರ್ಗದ ರೈತರು ತಮ್ಮ ಆಗುಹೋಗುಗಳಿಗೆ ನಿಭಾಯಿಸುವ ಸಲುವಾಗಿ ತಮ್ಮಲ್ಲಿರುವ ತೆಂಗುಗಳನ್ನು ಮಾರುತ್ತಿರುವಾಗ ಇಂತಹ ರೈತರಿಗೆ ಶೇಕಡಾ 4 ತೆರಿಗೆಯನ್ನು ವಿಧಿಸಿರುವುದು ಹಾಗೂ ಕೊಬ್ಬರಿಗೆ ಕೇವಲ ಶೇಕಡ 2 ತೆರಿಗೆಯನ್ನು ವಿಧಿಸುತ್ತಿರುವುದು ಈ ವ್ಯತ್ಯಾಸವನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

(ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಕೊಬ್ಬರಿಯನ್ನು ಎಣ್ಣೆ ಬೀಜವನ್ನಾಗಿ ಪರಿಗಣಿಸಿ ಎಣ್ಣೆಯನ್ನು ತೆಗೆಯಲು ಉಪಯೋಗಿಸುವುದರಿಂದ ಇತರೆ ಎಣ್ಣೆ ಬೀಜಗಳಿಗೆ ಅನ್ವಯಿಸುವ ಶೇಕಡಾ 2ರ ತೆರಿಗೆ ಕೊಬ್ಬರಿಗೆ ಇರುತ್ತದೆ.

ಆ) ಮೇಲೆ ಹೇಳಿರುವ ಕಾರಣದಿಂದಾಗಿ ತೆಂಗಿನ ಕಾಯಿ ಮತ್ತು ಕೊಬ್ಬರಿ ಇವುಗಳ ಮೇಲೆ ಕ್ರಮವಾಗಿ ಶೇಕಡಾ 4 ಮತ್ತು ಶೇಕಡಾ 2ರ ತೆರಿಗೆಯನ್ನು ಮುಂದುವರೆಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ

75 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಯೋಜನೆ ಸರಕಾರದವರಲ್ಲಿಯೇ?

ಆ) ಹಾಗಿಲ್ಲದಿದ್ದಲ್ಲಿ ಅವರಿಗೆ ಗೌರವಧನ ಹೆಚ್ಚಿಸಿರುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು)

ಅ) ಇಲ್ಲ

ಆ) ಈ ವಿಷಯವನ್ನು ಸರ್ಕಾರವು ಈಗಾಗಲೇ ಪರಿಶೀಲಿಸಿ ಆದೇಶ ಸಂಖ್ಯೆ ಮಮಇ 283 ಐಸಿಡಿ 95 ದಿನಾಂಕ 21-10-95ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ 100 : ರೂ.ಗಳು ಹೆಚ್ಚುವರಿ ಗೌರವಧನವನ್ನು ದಿನಾಂಕ 1-11-95ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರದ ವತಿಯಿಂದ ಮಂಜೂರು ಮಾಡಿದೆ.

ಮದ್ಯ ಮುಕ್ತ ಗ್ರಾಮ ಮಾಡುವ ನಿರ್ಣಯ

77 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತುಗಳು ಮದ್ಯ ಮುಕ್ತ ಗ್ರಾಮ ಮಾಡಬೇಕೆಂದು ನಿರ್ಣಯ ಮಾಡಿದ್ದರು ಅಬಕಾರಿ ಇಲಾಖೆ ಶರಾಬು ಅಂಗಡಿ, ಸಿಎಲ್-2, ಸಿಎಲ್-9, ಪರವಾನಿಗೆ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದು ಅಬಕಾರಿ ಇಲಾಖೆಯ ಜನವಿರೋಧಿ ನೀತಿಯಾಗುವುದಿಲ್ಲವೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೌದು, ಮದ್ಯ ಮುಕ್ತ ಗ್ರಾಮ ಮಾಡಬೇಕೆಂಬ ಗ್ರಾಮ ಪಂಚಾಯಿತಿ ನಿರ್ಣಯಗಳು, ಕರ್ನಾಟಕ ಅಬಕಾರಿ ಅಧಿಸೂಚನೆ 1965ರ ಅಡಿಯಲ್ಲಿ ರಚಿತವಾದ